**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.ರವರ ನ್ಯಾಯಾಲಯ, ಶ್ರೀರಂಗಪಟ್ಟಣ.**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ : 12/2025**

**ಚಾ.ಸಾ. :- 22**
**ಪ್ರಾ.ಸಾ. :- 03**

| | | |
|---|---|---|
| ಹೆಸರು | : | ಪ್ರಕಾಶ್.ಬಿ.ಎಸ್. |
| ತಂದೆಯ ಹೆಸರು | : | ಸಿದ್ದಯ್ಯ |
| ವಯಸ್ಸು | : | 44 ವರ್ಷ |
| ಉದ್ಯೋಗ | : | ಪೊಲೀಸ್ ನಿರೀಕ್ಷಕರು, ಮೈಸೂರು |
| ವಾಸಸ್ಥಳ | : | ಮೈಸೂರು. |

**ಪ್ರಮಾಣೀಕರಿಸಲಾದ ದಿನಾಂಕಃ- 09.02.2026.**

**<u>ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದ :</u>**

ನಾನು 2022 ರಿಂದ 2025 ರ ಅವಧಿಯಲ್ಲಿ ಶ್ರೀರಂಗಪಟ್ಟಣ ಟೌನ್ ಪೊಲೀಸ್ ಠಾಣೆಯಲ್ಲಿ ಪಿ.ಐ.ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 17.02.2025 ರಂದು ನಾನು ಠಾಣೆಯಲ್ಲಿ ಕರ್ತವ್ಯದಲ್ಲಿದ್ದಾಗ ಚಾ.ಸಾ-1 ರವರು ನೀಡಿದ ಲಿಖಿತ ದೂರನ್ನು ಪಡೆದುಕೊಂಡು ಪ್ರಕರಣವನ್ನು ದಾಖಲು ಮಾಡಿಕೊಂಡು, ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ದೂರನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಪ್ರ.ವ.ವರದಿಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-4 ಎಂದು ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

ನಂತರ ಕೃತ್ಯ ಸ್ಥಳಕ್ಕೆ ಹೋಗಿ ಪಂಚರ ಸಮಕ್ಷಮದಲ್ಲಿ ಕೃತ್ಯ ಸ್ಥಳದ ಮಹಜರನ್ನು ತಯಾರು ಮಾಡಿರುತ್ತೇನೆ. ಸದರಿ ಮಹಜರನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಮಹಜರ್ ಸಮಯದಲ್ಲಿ ಕಚ್ಚಾ ನಕಾಶೆಯನ್ನು ತಯಾರು ಮಾಡಿರುತ್ತೇನೆ. ಅದನ್ನು ಈಗ ನೋಡುತ್ತಿದ್ದು ನಿಪಿ-5 ಎಂದು ಗುರುತಿಸಲಾಯಿತು. ಅಪಘಾತ ಸ್ಥಳದ ಫೋಟೋಗಳನ್ನು ತೆಗೆಯಿಸಿರುತ್ತೇನೆ. ಪಂಚರ ಸಮಕ್ಷಮ ಅಪಘಾತಕ್ಕೆ ಸಂಬಂಧಿಸಿದಂತೆ 2 ವಾಹನಗಳನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ. ಸದರಿ ವಾಹನಗಳ ಹಾಗೂ ಅಪಘಾತ ಸ್ಥಳದ 6 ಫೋಟೋಗಳನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿದೆ. ಆ ಸಮಯದಲ್ಲಿ ಲಾರಿಯಲ್ಲಿದ್ದ ಕಲ್ಲುಗಳನ್ನು ಬೇರೆ ವಾಹನದ ಮೂಲಕ ತೆಗೆದುಕೊಂಡು ಹೋಗಿರುತ್ತಾರೆ.

ಪಂಚರ ಸಮಕ್ಷಮ ಮೃತರ ಶವಪಂಚನಾಮೆಯನ್ನು ಜರುಗಿಸಿರುತ್ತೇನೆ. ಅದನ್ನು ಈಗ ನೋಡುತ್ತಿದ್ದು ನಿಪಿ-6 ಎಂದು ಗುರುತಿಸಲಾಯಿತು. ಸಾಕ್ಷಿದಾರರ ಹೇಳಿಕೆ ದಾಖಲು ಮಾಡಿಕೊಂಡಿರುತ್ತೇನೆ. ಫೋಟೋಗಳನ್ನು ಪಂಚನಾಮೆಯ ಸಮಯದಲ್ಲಿ ತೆಗೆಯಿಸಿರುತ್ತೇನೆ. ಮೃತರ ಮರಣೋತ್ತರ ಪರೀಕ್ಷೆಯನ್ನು ಮಾಡುವಂತೆ ಮನವಿ ಸಲ್ಲಿಸಿರುತ್ತೇನೆ.

ತನಿಖಾ ಸಮಯದಲ್ಲಿ ಸಿಬ್ಬಂದಿಗಳ ಮೂಲಕ ಫೋಟೋಗಳನ್ನು ತೆಗೆಸಿದ್ದು, ಆ ಸಂಬಂಧವಾಗಿ ಕಲಂ.63(4) ಭಾರತೀಯ ಸಾಕ್ಷ್ಯ ಅಧಿನಿಯಮದಡಿ ಸರ್ಟಿಫಿಕೇಟ್ ಪಡೆದುಕೊಂಡಿರುತ್ತೇನೆ. ಸದರಿ ಸರ್ಟಿಫಿಕೇಟನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-7 ಎಂದು ಗುರುತಿಸಲಾಯಿತು.

ಅಪಘಾತಕ್ಕೆ ಸಂಬಂಧಿಸಿದಂತೆ ಎರಡೂ ವಾಹನಗಳನ್ನು ಪರಿಶೀಲನೆ ಮಾಡಿ ಐ.ಎಂ.ವಿ.ವರದಿ ಸಲ್ಲಿಸುವಂತೆ ಆರ್.ಟಿ.ಓ.ರವರಿಗೆ ಮನವಿ ಸಲ್ಲಿಸಿ, ನಂತರದಲ್ಲಿ ವರದಿಯನ್ನು ಪಡೆದುಕೊಂಡಿರುತ್ತೇನೆ. ಸದರಿ ಐ.ಎಂ.ವಿ.ವರದಿಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-8 ಎಂದು ಗುರುತಿಸಲಾಯಿತು.

ನಂತರ ಅಪಘಾತಪಡಿಸಿದ ವಾಹನದ ಮಾಲೀಕರಿಗೆ ಐ.ಎಂ.ವಿ.ಕಾಯ್ದೆಯಡಿ ನೋಟೀಸ್ ನೀಡಿ ಉತ್ತರ ಪಡೆದಿರುತ್ತೇನೆ. ಸದರಿ ನೋಟೀಸ್ ಮತ್ತು ಉತ್ತರವನ್ನು ಈಗ ನೋಡುತ್ತಿದ್ದು, ಅವುಗಳನ್ನು ನಿಪಿ-9 ಮತ್ತು 10 ಎಂದು ಗುರುತಿಸಲಾಯಿತು. ಆರ್.ಟಿ.ಓ.ಅಧಿಕಾರಿಗಳು ವಾಹನವನ್ನು ಪರಿಶೀಲಿಸಿದ ನಂತರ ವಾಹನವನ್ನು ಬಾಂಡ್ ಪಡೆದು ಬಿಡುಗಡೆ ಮಾಡಿರುತ್ತೇನೆ.

ನಂತರ ಅಪಘಾತಕ್ಕೆ ಒಳಗಾದ ವಾಹನದ ಮಾಲೀಕರಿಗೆ ಐ.ಎಂ.ವಿ.ಕಾಯ್ದೆಯಡಿ ನೋಟೀಸ್ ನೀಡಿ ಉತ್ತರ ಪಡೆದಿರುತ್ತೇನೆ. ಸದರಿ ನೋಟೀಸ್ ಮತ್ತು ಉತ್ತರವನ್ನು ಈಗ ನೋಡುತ್ತಿದ್ದು, ಅವುಗಳನ್ನು ನಿಪಿ-11 ಮತ್ತು 12 ಎಂದು ಗುರುತಿಸಲಾಯಿತು. ಆರ್.ಟಿ.ಓ.ಅಧಿಕಾರಿಗಳು ವಾಹನವನ್ನು ಪರಿಶೀಲಿಸಿದ ನಂತರ ವಾಹನವನ್ನು ಬಾಂಡ್ ಪಡೆದು ಬಿಡುಗಡೆ ಮಾಡಿರುತ್ತೇನೆ.

ಮೃತರ ದೇಹದ ಭಾಗಗಳನ್ನು ಸಿಬ್ಬಂದಿಯವರು ಹಾಜರುಪಡಿಸಿದ್ದು ಅದನ್ನು FSL ಗೆ ಕಳುಹಿಸಿ ವರದಿಯನ್ನು ಪಡೆದಿರುತ್ತೇನೆ. ಸದರಿ ವರದಿಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-13 ಎಂದು ಗುರುತಿಸಲಾಯಿತು.

ಮೃತರ ಪಿ.ಎಂ.ವರದಿಯನ್ನು ಸ್ವೀಕರಿಸಿ ಕಡತಕ್ಕೆ ಲಗತ್ತಿಸಿಕೊಂಡಿರುತ್ತೇನೆ. ಸದರಿ ವರದಿಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-14 ಎಂದು ಗುರುತಿಸಲಾಯಿತು.

ಗಾಯಾಳುವಿನ ಗಾಯದ ಪ್ರಮಾಣ ಪತ್ರಗಳನ್ನು ಸ್ವೀಕರಿಸಿರುತ್ತೇನೆ. ಅವುಗಳನ್ನು ನಿಪಿ-15 ಮತ್ತು 16 ಎಂದು ಗುರುತಿಸಲಾಯಿತು.

ಆರೋಪಿ ಠಾಣೆಗೆ ಹಾಜರಾಗಿದ್ದು, ಅವರಿಗೆ ನೋಟೀಸ್ ಜಾರಿ ಮಾಡಿ ಬಾಂಡ್ ಪಡೆದು ಜಾಮೀನಿನ ಮೇಲೆ ಅವರನ್ನು ಬಿಡುಗಡೆ ಮಾಡಿರುತ್ತೇನೆ.

ತನಿಖಾ ಸಮಯದಲ್ಲಿ ಸಾಕ್ಷಿದಾರರ ಹೇಳಿಕೆ ದಾಖಲು ಮಾಡಿಕೊಂಡಿರುತ್ತೇನೆ.

ನಂತರ ಪ್ರಕರಣದ ತನಿಖೆ ಪೂರ್ಣಗೊಂಡಿದ್ದರಿಂದ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸಿರುತ್ತೇನೆ.

**ಪಾಟೀ ಸವಾಲು : ಆರೋಪಿ ಪರ ವಕೀಲರಿಂದ :**

ಅಪಘಾತ ಸ್ಥಳ ಸೇತುವೆಯ ಮೇಲೆ ಆಗಿದ್ದು, ಕೆಳಭಾಗದಲ್ಲಿ ಹೋಟೆಲ್ ಗಳಿವೆ ಎಂದರೆ ಸುಳ್ಳು. ಅಲ್ಲಿ ಹೋಟೆಲ್ ಗಳು ಇದ್ದರೂ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತರು ಮದ್ಯಪಾನ ಮಾಡಿದ್ದರು ಎಂದು ನಿಪಿ-13 ರಲ್ಲಿ ನಮೂದು ಇದೆ ಎಂದರೆ ಸರಿ. ಮೃತರ ಜೊತೆ ಕೆಲಸ ಮಾಡುತ್ತಿದ್ದ ಇನ್ನಿಬ್ಬರು ವ್ಯಕ್ತಿಗಳು ಮದ್ಯಪಾನ ಮಾಡಿದ್ದರೋ ಇಲ್ಲವೋ ಎಂದು ನಾನು ತನಿಖೆ ಮಾಡಿಲ್ಲ. ಕೆಟ್ಟು ನಿಂತಿದ್ದ ವಾಹನದ ಫ್ಯಾನ್ ಬೆಲ್ಟನ್ನು ಅಮಾನತ್ತುಪಡಿಸಿಕೊಂಡಿಲ್ಲ. ಮೃತ ರಾಜುರವರ ಮೊಬೈಲನ್ನು ಅಮಾನತ್ತುಪಡಿಸಿಕೊಂಡಿಲ್ಲ.

ಆರೋಪಿ ತಪ್ಪಿನಿಂದ ಅಪಘಾತವಾಗದೇ ಇದ್ದರೂ ದೂರುದಾರರ ಕುಟುಂಬಕ್ಕೆ ಸಹಾಯ ಮಾಡಲು ಸುಳ್ಳು ದೂರಿನ ಆಧಾರದ ಮೇಲೆ ಸುಳ್ಳು ಪ್ರಕರಣವನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಸ್ಥಳ ಪಂಚನಾಮೆಗೆ ಸಾಕ್ಷಿಯಾಗುವಂತೆ ಪಂಚರಿಗೆ ನೋಟೀಸ್ ಕೊಟ್ಟಿರುತ್ತೇನೆ. ನಾನು ಸ್ಥಳಕ್ಕೆ ಭೇಟಿ ಕೊಟ್ಟಿಲ್ಲ ಹಾಗೂ ಪ್ರಕರಣಕ್ಕೆ ಅನುಕೂಲವಾಗುವಂತೆ ಸ್ಥಳ ಮಹಜರ್, ಕಚ್ಚಾ ನಕಾಶೆ ತಯಾರು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರ ಹೇಳಿಕೆಗಳನ್ನು ಪ್ರಕರಣಕ್ಕೆ ಅನುಕೂಲವಾಗುವಂತೆ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ತನಿಖಾ ಸಮಯದಲ್ಲಿ ಆರೋಪಿಯ ತಪ್ಪು ಇರುವುದಿಲ್ಲವೆಂದು ಕಂಡು ಬಂದಿರುತ್ತದೆ ಎಂದರೆ ಸರಿಯಲ್ಲ.

ಮೃತರ ತಪ್ಪಿನಿಂದಲೇ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಮೃತರು ಮದ್ಯಪಾನ ಮಾಡಿದ್ದು, ಅವರ ಅಜಾಗರೂಕತೆ ಹಾಗೂ ನಿರ್ಲಕ್ಷ್ಯತನದಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ.

ಹೊಸ ಕಾಯ್ದೆಯ ಪ್ರಕಾರ ಪಂಚನಾಮೆಯ ಸಮಯದಲ್ಲಿ ಕಡ್ಡಾಯವಾಗಿ ವಿಡಿಯೋ ಮಾಡಬೇಕಿತ್ತು ಎಂದರೆ ಸರಿಯಲ್ಲ.

ಆರೋಪಿ ಸ್ಥಳದಿಂದ ಪರಾರಿಯಾಗಿರಲಿಲ್ಲ ಎಂದರೆ ಸುಳ್ಳು. ಮುಖ್ಯ ರಸ್ತೆಯಲ್ಲಿ ವಾಹನದಿಂದ ಇಳಿಯಬಾರದು ಎಂದು ಸೂಚನಾ ಫಲಕ ಇರುತ್ತದೆ ಎಂದರೆ ಸಾಕ್ಷಿ ವಾಹನ ಕೆಟ್ಟು ನಿಂತಿದ್ದರಿಂದ ಕೆಳಗೆ ಇಳಿದಿದ್ದರು ಎನ್ನುತ್ತಾರೆ.

ಆರೋಪಿ ಯಾವುದೇ ತಪ್ಪು ಮಾಡದಿದ್ದರೂ ದೂರುದಾರರ ಕುಟುಂಬಕ್ಕೆ ವಿಮೆ ಪರಿಹಾರ ಕೊಡಿಸುವ ಸಲುವಾಗಿ ಸುಳ್ಳು ದಾಖಲಾತಿ ಸೃಷ್ಟಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ :-</u> ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

**ಪ್ರಧಾನ ಹಿರಿಯ ಸಿಜೆ ಮತ್ತು**
**ಜೆ.ಎಂ.ಎಫ್.ಸಿ., ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**